

# ಐಷಾರಾಮಿ ಐಸ್ ಬಾರ್

ಗುಂಡಿನ ಗುಂಗು ಹೆಚ್ಚು ತಲೆಗೇರದೆ ಥಂಡಾ ಥಂಡಾ ಕೂಲ್ ಕೂಲ್ ಅಂತ ಮಂದವಾಗಿ ಕಿಕ್ ಹೊಡೆಯಬೇಕು. ಅದಕ್ಕಾಗಿ ಬಾರ್‌ಗಳಲ್ಲಿ ವಿಸ್ಕಿಗೆ ಐಸ್ ಕ್ಯೂಬ್ ಮಿಕ್ಸ್ ಮಾಡಿಕೊಳ್ಳಲು ಕೊಡುತ್ತಾರೆ. ಅಲ್ಲಿರುವ ಹವಾಮಾನದ ಸಹಜ ಉಷ್ಣಾಂಶದಿಂದ ಬೇಗ ಗರಂ ಆಗುವುದರಿಂದ ಇನ್ನೂ ಒಂದೆರಡು ಪೆಗ್ ಹೀರಬೇಕೆಂಬ ಮನಸ್ಸಿದ್ದರೂ ಕಿಕ್ ಜಾಸ್ತಿ ಎನಿಸಿಬಿಡಬಹುದು. ಅದಕ್ಕಾಗಿ ಪಾನಪ್ರಿಯರಿಗೆ ಐಷಾರಾಮಿ ಐಸ್ ಬಾರ್‌ಗಳು ಜಗತ್ತಿನ ಹಲವೆಡೆ ತಲೆ ಎತ್ತಿವೆ.

ಈ ಮೊದಲು ಇಂಗ್ಲೆಂಡ್, ಥಾಯ್ಲೆಂಡ್ ಸೇರಿದಂತೆ ಕೆಲ ರಾಷ್ಟ್ರಗಳಲ್ಲಿ ಇಂಥ ಐಸ್ ಬಾರ್‌ಗಳು ಹೆಸರುವಾಸಿಯಾಗಿದ್ದವು. ಇತ್ತೀಚೆಗೆ ಮುಂಬೈಯಲ್ಲಿ ಅಂತಹ ಒಂದು ಐಷಾರಾಮಿ ಐಸ್ ಬಾರ್ ಆರಂಭಿಸಲಾಗಿದೆ. ಐಸ್ ಬಾರ್‌ನ ಶೀತಪ್ರದೇಶದಲ್ಲಿ ಮೈ ನಡುಗುವ ಚಳಿಯಿಂದ ತಪ್ಪಿಸಿಕೊಳ್ಳಬೇಕೆಂದರೆ ಗುಂಡೇ ಮದ್ದು!

ಮುಂಬೈಯಲ್ಲಿ ಆರಂಭವಾಗಿರುವ ಬಾರ್ ಕೂಡ ವಿದೇಶಗಳ ಬಾರ್‌ನಂತೆಯೇ ವಿನ್ಯಾಸಗೊಂಡಿದೆ. ಕಟ್ಟಡದ ಒಳಾವರಣ ಸಂಪೂರ್ಣ ಮಂಜುಗಡ್ಡೆಯಿಂದ ನಿರ್ಮಾಣಗೊಂಡಿದೆ. ಮಂಜು ಕರಗದಂತೆ ನೋಡಿಕೊಳ್ಳಲು ಅಲ್ಲಿನ ಉಷ್ಣಾಂಶವನ್ನು −5 ಡಿಗ್ರಿ ಸೆಲ್ಸಿಯಸ್ ಇರುವಂತೆ ನೋಡಿಕೊಳ್ಳಲಾಗುತ್ತದೆ. ಎಲ್ಲಾ ಬಗೆಯ ಉಪಕರಣಗಳನ್ನೂ ಮಂಜಿನಲ್ಲಿಯೇ ಮಾಡಿರುವುದು ವಿಶೇಷ. ಗೋಡೆಯಿಂದ ಹಿಡಿದು ಕೂರುವ ಕುರ್ಚಿ, ಮೇಜು, ಲೋಟ ಎಲ್ಲವನ್ನೂ ಮಂಜಿನಿಂದ ಮಾಡಲಾಗಿದೆ.

ಮುಂಬೈನ ಓಶಿವಾರಾದಲ್ಲಿನ ಮೆಗಾ ಮಾಲ್ ಸಮೀಪದಲ್ಲಿಯೇ ಇದನ್ನು ನಿರ್ಮಿಲಾಗಿದೆ. ಒಳಗೆ ಪ್ರವೇಶಿಸುವ ಮುನ್ನ ಆ ವಾತಾವರಣಕ್ಕೆ ಹೊಂದಿಕೊಳ್ಳಲು ಬೆಚ್ಚಗಿನ ಉಡುಪನ್ನು ಕೊಡಲಾಗುತ್ತದೆ. ಒಂದು ರೀತಿಯಲ್ಲಿ ಅದು ಶಾಲಾ ಸಮವಸ್ತ್ರದಂತೆ ಕಾಣುವ ಬಾರ್ ಸಮವಸ್ತ್ರ! ನೀಲಿ ಬಣ್ಣದ ಕೋಟು, ಬೂಟು, ಕೈಗವುಸು ಎಲ್ಲವನ್ನೂ ಹಾಕಿಕೊಂಡು ಕೂತರೆ ಪೆಗ್ಗಿನ ಮೇಲೆ ಪೆಗ್ಗು ಹಾಕಿದರೂ ಗೊತ್ತಾಗದು. ಮತ್ತಿನಲ್ಲೇ ಸ್ಕೇಟಿಂಗ್ ಮಾಡಬಹುದು. ಒಟ್ಟಾರೆ ಶ್ರೀಮಂತ 'ವಾರ್ಮ್ ಮ್ಯಾನ್'ಗಳಿಗೆ ಹೇಳಿ ಮಾಡಿಸಿದಂತಿದೆ ಈ ಬಾರ್.

−ರಾಘು

ಚಿತ್ರಗಳು: ಎಪಿ



